Grant of Land for the Extension of Hosadoddi Village

583. **Sri C. R. RANGE GOWDA** (Magadi).—

Will the Minister for Revenue be pleased to state :—

(*a*) whether the villagers of Hosadoddi, Madabal Hobli, Magadi taluk have requested the Government for the grant of land for the village extension ;

(*b*) the arrangement made by the Government for village extension ?

Sri H. V. KOUJALGI (Minister for Revenue).—

(*a*) Yes.

(*b*) Proposals once received had to be dropped owing to the reported unsuitability of the land. Fresh proposals are awaited.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನವರು ಗ್ರಾಮ ವಿಸ್ತರಣೆಗಾಗಿ ಜಮೀನನ್ನು ಕೋರಿ ಯಾವಾಗ ಅರ್ಜಿ ಕೊಟ್ಟರು ?

† ಶ್ರೀ ಎಚ್. ವಿ. ಕೌಜಲಗಿ.—ಇದು 1963 ನೇ ಇಸವಿಯಿಂದ ನಡೆಯುತ್ತಿತ್ತು. ಸ್ವಲ್ಪ ವರ್ಷಗಳ ನಂತರ ಅದು ಡ್ರಾಪ್ ಆಯಿತು.

ಶ್ರೀ ಸಿ. ಆರ್. ರಂಗೇ ಗೌಡ.—1963 ನೇ ಇಸವಿಯಲ್ಲಿ ಅರ್ಜಿ ಕೊಟ್ಟಿದ್ದಾರೆ. ಸರ್ಕಾರದವರು ನಿಧಾನ ಮಾಡಿದ್ದರಿಂದ, ಯಾವ ಪ್ರದೇಶವನ್ನು ಕೇಳಿದ್ದಾರೋ, ಅಲ್ಲಿ ರೈತರು ತೆಂಗಿನ ಸಸಿಯನ್ನು ಹಾಕಿದ್ದಾರೆ. ಆದ್ದರಿಂದ ಜಾಗ್ರತೆ ಬೇರೆ ಕಡೆ ನಿವೇಶನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri H. V. KOUJALGI.—When the owner of the site took objection, there was a local inspection by the concerned officer. At that time, he found that there were already coconut trees. So that site had to be dropped. A new site has been proposed and we will take early steps to acquire that site.

ಶ್ರೀ ಸಿ. ಆರ್. ರಂಗೇಗೌಡ.—ಈಗ ಸರ್ಕಾರದವರು ಕೇಳಿದ ಹಣ ಕೊಟ್ಟಿದ್ದಾರೆ. ಪಂಚಾಯಿತಿಯವರು ರಿಸೊಲ್ಯೂಶನ್ ಮಾಡಿದ್ದಾರೆ. ಆದ್ದರಿಂದ ಜಾಗ್ರತೆ ರಿಕಾರ್ಡು ತರಿಸಿ, ಮಂಜೂರು ಮಾಡುತ್ತೀರಾ ?

Sri H. V. KOUJALGI.—We have given instructions to the acquisition officer to take early steps.

Chickmagalur District Public Library Building

591. **Sri C. M. S. SASTRY** (Chickmagalur).—

Will the Minister for Development be pleased to state :—

(*a*) Whether it is a fact that Chickmagalur District Board Building was constructed from public funds on the occasion of the celebration of the Silver Jubilee of the late Highness Sri Krishnarajendra Wodeyar to commemorate the celebrations ;

(*b*) whether the building was designed for locating the District Public Library and reading room on the ground floor ;

(*c*) since when the Library has continued to be there in the said building ;

(*d*) is not the Library a part of the District Board as the District Board President is also *ex-officio* President of the Library and Reading Room ;

(*e*) whether the District Board was levying any rent for the Library and Reading room then ;

(*f*) whether the premises of the said building were vacated for housing the Intermediate College on the express assurance given by the District Board President that the premises could be re-occupied immediately after the college was shifted to a different building ?

SRI B. L. GOWDA (Deputy Minister for Co-operation).—

(*a*) The building was constructed out of the funds of the former District Board, Chickmagalur and was named as Sri Krishnarajendra Silver Jubilee Building ".

(*b*) Yes.

(*c*) 9th September, 1931.

(*d*) No.

(*e*) No.

(*f*) Yes.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ಚಿಕ್ಕಮಗಳೂರಿನಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಬಿಲ್ಡಿಂಗ್ ಜಿಲ್ಲಾ ಮಂಡಲಿಯ ಹಣದಿಂದ ನಿರ್ಮಾಣವಾಯಿತೇ ಅಥವಾ ಸಾರ್ವಜನಿಕರಿಂದ ಶೇಖರಣೆ ಮಾಡಿದ ಹಣ ಕೂಡ ಇದಕ್ಕೆ ಸೇರಿದೆಯೇ ?

1-30. P. M.

† ಶ್ರೀ ಬಿ. ಎಲ್. ಗೌಡ.—ಅದರ ವಿವರ ಈಗ ನನ್ನ ಹತ್ತಿರ ಇಲ್ಲ. ಜಿಲ್ಲಾಬೋರ್ಡಿನ ಫಂಡಿನಿಂದ ಆ ಕಟ್ಟಡವನ್ನು ಕಟ್ಟಿದೆ ಎಂದು ವರದಿಯಲ್ಲಿ ಇದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ ನನಗೆ ಸರಿಯಾದ ಉತ್ತರ ಬರಲಿಲ್ಲ. ಈಗ ಆ ಕಟ್ಟಡ ಜಿಲ್ಲಾ ಮಂಡಲಿಯ ಹಣದಿಂದ ನಿರ್ಮಾಣವಾಗಿದೆ ಎಂದು ಹೇಳಿದಿರಿ, ಹಾಗಾದರೆ ಸಾರ್ವಜನಿಕರಿಂದ ಶೇಖರಣೆ ಮಾಡಿದ ಹಣ ಏನಾಯಿತು ?

ಶ್ರೀ ಬಿ. ಎಲ್. ಗೌಡ.—ಇದು 30, 40, 50, ಹಿಂದಿನ ವರ್ಷಗಳಿಗೆ ಸಂಬಂಧಪಟ್ಟ ಲೆಕ್ಕ. ಆದ್ದರಿಂದ ಆ ವಿವರಗಳು ಈಗ ನನ್ನಲ್ಲಿ ಇಲ್ಲ. ಆ ಕಟ್ಟಡವನ್ನು ಜಿಲ್ಲಾಬೋರ್ಡಿನ ಹಣದಿಂದ ಕಟ್ಟಿದೆ ಎಂದು ವರದಿಯಲ್ಲಿ ಇದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಮೊದಲು ಜಿಲ್ಲಾ ಮಂಡಲಿಯವರು ಸದರಿ ಗ್ರಂಥಾಲಯ ಮತ್ತು ವಾಚನಾಲಯಗಳಿಗಾಗಿ ಬಾಡಿಗೆಯನ್ನೇನಾದರೂ ವಸೂಲಿ ಮಾಡುತ್ತಿದ್ದರೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಈಗಲೂ ಕೂಡ ಹಾಗೇಯೇ ಮುಂದುವರಿಸಿಕೊಂಡು ಹೋಗುತ್ತೀರಾ ?

ಶ್ರೀ ಬಿ. ಎಲ್. ಗೌಡ.—ತಮ್ಮ ಕೋರಿಕೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.